ತಣ್ಣನೆಯ ಗಾಳಿ ಸಣ್ಣ ಸದ್ದಿನ ಜೊತೆ ಬೀಸುತ್ತಿತ್ತು. ಹಾಗೆ ನೋಡಿದರೆ, ಹಬ್ಬ ಹರಿದಿನಗಳು ಹತ್ತಿರ ಬಂದಾಗ ವ್ಯಾಪಾರ ಸ್ವಲ್ಪ ಬಿರುಸು. ತಡವಾಗಿ ಹೋಗುವುದು ಸಹಜವಾಗಿತ್ತು. ಆದರೆ, ಇಂದಿನ ಹಾಗೆ ಯಾವತ್ತೂ ಅನ್ನಿಸಿರಲಿಲ್ಲ. ಅರೇ! ಅದೇ ಕಾಲೆಳೆದು ನಡೆಯುವ ಸದ್ದು. ಮತ್ತೆ ಅತ್ತ ಬೆಳಕು ಹಾಯಿಸಿದೆ. ಅಸ್ಪಷ್ಟವಾಗಿ ಮನುಷ್ಯ ಆಕೃತಿ! ತಲೆಯ ಮೇಲೆ ದೊಡ್ಡ ಹುಲ್ಲಿನ ಹೊರೆಯಂತೆ ಕಾಣಿಸಿತು. ಯಾರೋ ಕೆಲಸ ಬಿಟ್ಟು ಹೋಗುವಾಗ ಮನೆಯ ದನಗಳಿಗೆ ಹುಲ್ಲು ಹೊತ್ತುಕೊಂಡು ಹೋಗುತ್ತಿರಬೇಕು. ಆದರೂ ಇಷ್ಟು ತಡ ಮಾಡಬೇಕಿತ್ತೇ? ನಮ್ಮೂರಲ್ಲಿ ಐದು ಗಂಟೆಗೆ ಕೂಲಿಯಾಳುಗಳ ಕೆಲಸದ ನಿಲುಗಡೆಯಾಗುತ್ತದೆ. ಆಮೇಲೆ ಸಾರಾಯಿ ಅಂಗಡಿ, ದಿನಸಿ ಅಂಗಡಿ ಬಳಿ ಜನ ತುಂಬಿಕೊಳ್ಳುವುದು. ದುಡಿತಕ್ಕೆ ಹೆಣ್ಣು ಗಂಡು ಭೇದ ಇರಲಿಲ್ಲ. ಆದರೆ, ಸಂಬಳದ ವಿಚಾರದಲ್ಲಿ ಹೆಣ್ಣಾಳಿಗೆ ಒಂದಿಷ್ಟು ಕಡಿಮೆ ಲೆಕ್ಕವೇ. ಆ ವ್ಯಕ್ತಿ ನನ್ನಿಂದ ವೇಗವಾಗಿ ನಡೆಯುತ್ತಿದ್ದ. ನನ್ನಲ್ಲಿ ಪುಟ್ಟ ಕೈ ಚೀಲ ಬಿಟ್ಟರೆ ಬೇರೇನೂ ಭಾರ ಇರಲಿಲ್ಲ. ಆದರೆ, ಆತನಲ್ಲಿ ದೊಡ್ಡ ಹುಲ್ಲಿನ ಹೊರೆ ಇತ್ತು. ಅದರಲ್ಲಿ ಅಚ್ಚರಿಯೇನಿರಲಿಲ್ಲ. ಅವನು ನಿತ್ಯ ಮೈಮುರಿದು ಗಾಳಿ ಬಿಸಿಲಿಗೆ ಮೈಯೊಡ್ಡಿ ದುಡಿಯುವವನು, ನಾನೋ ಬೆಚ್ಚಗಿನ ಸೂರಿನಡಿ ಕುಳಿತು ವ್ಯಾಪಾರ ಮಾಡಿ ಸೊಂಟದ ಸುತ್ತಾ ಬೊಜ್ಜು ಸುತ್ತಿಕೊಂಡವನು. ಪ್ರಾಯ ಹೆಚ್ಚಾದ ಹಾಗೆ ಮತ್ತೂ ದಪ್ಪಗಾಗುತ್ತಿದ್ದೇನೆ ಎಂಬ ಆತಂಕ ಕಾಡುತ್ತಿತ್ತು. ಆ ಕ್ಷಣ ಅಸ್ಪಷ್ಟವಾಗಿ ಕಾಣಿಸುತ್ತಿದ್ದ ಆತನ ಸದೃಢ ನಡಿಗೆ ಅಸೂಯೆ ಹುಟ್ಟಿಸಿದ್ದು ಸುಳ್ಳಲ್ಲ. ಹಿಂಬಾಲಿಸುವ ಆಸಕ್ತಿ ಹುಟ್ಟಲಿಲ್ಲ. ನಾನು ನಿಧಾನಿಸಿದೆ. ಒಂದಿಷ್ಟು ದೂರ ಹೋದ ಹಾಗೆ ಆತ ಬಹಳ ಮುಂದೆ ಹೋಗಿ ಕಣ್ಮರೆಯಾಗಿದ್ದ. ನಾನು ನನ್ನ ಯಾವತ್ತಿನ ವೇಗದಲ್ಲಿ ಮನೆ ಸೇರಿಕೊಂಡೆ. ಅನಂತರ ಅದೇ ಹೊತ್ತಿಗೆ ಮರಳುವಾಗೆಲ್ಲಾ ಆತ ನನ್ನಿಂದ ಬಹಳ ಮುಂದೆ ಇರುತ್ತಿದ್ದ. ಮಾತನಾಡಿಸಲು ಸಾಧ್ಯವಾಗುತ್ತಿರಲಿಲ್ಲ. ಯಾಕೋ ನನ್ನಲ್ಲಿ ಕುತೂಹಲ ಮೆಲ್ಲಗೆ ಚಿಗುರುತ್ತಿತ್ತು. ಮನೆಯಲ್ಲಿ ಮಡದಿಯೆದುರು ಒಮ್ಮೆ ಈ ವಿಚಾರ ತೆಗೆದಿದ್ದೆ. "ನಮ್ಮದೇ ಊರಿನಲ್ಲಿ ನಿಮಗೆ ಅಪರಿಚಿತರು ಯಾರು? ಅದೂ ಈಗ ಗದ್ದೆಗಳೇ ಇಲ್ಲ. ಹೊಲಗಳನ್ನು ನೋಡಬೇಕಾದರೆ ಊರಾಚೆ ಹೋಗಬೇಕು! ಒಮ್ಮೆ ಸರಿಯಾಗಿ ಹತ್ತಿರದಿಂದ ಮಾತನಾಡಿಸುವುದಪ್ಪ. ಆದರೂ ನನಗೆ ಅಚ್ಚರಿ, ಆ ರಾತ್ರಿ ಹೊತ್ತಿನಲ್ಲಿ ಆಯಪ್ಪ ದಿನಾ ಹುಲ್ಲಿನ ಹೊರೆ ಎಲ್ಲಿಂದ ತರುವುದು?" ಹೀಗಂದು ಆಕೆ ನನ್ನ ಕುತೂಹಲದ ಬೆಂಕಿಗೆ ತುಪ್ಪ ಸುರಿದಿದ್ದಳು. ಇನ್ನೊಂದು ಸಲ ಸಿಕ್ಕರೆ ಖಂಡಿತ ಮಾತನಾಡಿಸಿ ಈ ಪ್ರಶ್ನೆಗಳಿಗೆ ತೆರೆ ಎಳೆಯಬೇಕು ಎಂದು ನಿರ್ಧಾರ ಮಾಡಿಕೊಂಡಿದ್ದೆ.

ಅದಕ್ಕೆ ಸಮಯವೂ ಕೂಡಿ ಬಂದಿತ್ತು. ಮರುದಿನ ಗಿರಾಕಿಗಳೆಲ್ಲಾ ಖಾಲಿಯಾದಾಗ ಎಂಟು ಗಂಟೆಗೆ ಇನ್ನೂ ಐದು ನಿಮಿಷ ಬಾಕಿ ಇತ್ತು. ತಕ್ಷಣ ಆತನ ನೆನಪಾಯಿತು. ಲಗುಬಗೆಯಿಂದ ಷಟರ್ ಬೀಗ ಎಳೆದೆ. ಅಷ್ಟರಲ್ಲಿ ನನ್ನ ಕಾಯಂ ಗಿರಾಕಿ ಚೀನ್ಯ ಓಡುತ್ತಾ ಬಂದಿದ್ದ. ಆದರೆ, ನಾನು ನಿರ್ಧರಿಸಿ ಆಗಿತ್ತು. ಹಾಗಾಗಿ, ವ್ಯಾಪಾರದ ಮುಖ ನೋಡದೇ ಆತನನ್ನು ಬರಿಗೈಲಿ ಮರಳಿ ಕಳುಹಿಸಿದೆ. ಕೈಚೀಲವನ್ನು ಹಿಡಿದುಕೊಂಡು ಲಗುಬಗೆಯಿಂದ ರಸ್ತೆಯತ್ತ ಬಂದೆ. ಯಾರೂ ಕಾಣಲಿಲ್ಲ. ಈಗೊಂದು ಸಮಸ್ಯೆ ಎದುರಾಯಿತು. ಆತ ಯಾವ ಕಡೆಯಿಂದ ನಾನು ಹೋಗುವ ರಸ್ತೆಗೆ ಸೇರಿಕೊಳ್ಳುತ್ತಾನೆ ಎಂದು ಗೊತ್ತಿರಲಿಲ್ಲ. ಅರ್ಧ ದಾರಿಯಲ್ಲಿ ಆತನನ್ನು ನಾನು ನೋಡುತ್ತಿದ್ದದ್ದು. ಈಗ ಆತ ಹೋಗಿರಬಹುದೇ? ಇಲ್ಲ, ಬರಬೇಕಷ್ಟೆಯೇ? ಗೊಂದಲವಾಗಿತ್ತು. ಗಡಿಯಾರ ನೋಡಿಕೊಂಡೆ. ಸರಿಯಾಗಿ ಎಂಟು ಗಂಟೆ! ಹಾಗಾದರೆ, ಆತ ಹೋಗಿರಬಹುದು. ನಾನು ವೇಗವಾಗಿ ನಡೆಯತೊಡಗಿದೆ. ನನ್ನ ಕಿವಿಗಳು ನಿಮಿರಿಕೊಂಡಿದ್ದವು. ಟಾರ್ಚಿನ ಬೆಳಕನ್ನು ಆಗಾಗ ಮುಂದಕ್ಕೆ ಹಿಂದಕ್ಕೆ ಹಾಯಿಸುತ್ತಾ ನಡೆದೆ. ಆತನ ಪತ್ತೆಯಿಲ್ಲ. ಇವತ್ತು ಆತ ಕೆಲಸಕ್ಕೆ ಹೋಗಿರಲಿಕ್ಕಿಲ್ಲ. ನಾನು ಸುಮ್ಮನೆ ಕಾದದ್ದೇ ಬಂತು ಎಂದು ಮನಸ್ಸಿಗೆ ನಿರಾಸೆಯಾಯಿತು. ಜೊತೆಗೆ, ಈ ಮನುಷ್ಯರಿಗೆ ಏನೆಲ್ಲಾ ಕುತೂಹಲಗಳು! ಸಣ್ಣ